ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀಮತಿ ವೀಣಾ ಅಚ್ಚಯ್ಯ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 730
ಉತ್ತರಿಸಬೇಕಾದ ದಿನಾಂಕ : 22-02-2022
ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಕೊಡಗು ಜಿಲ್ಲೆಯಲ್ಲಿ 2021-22 ನೇ ಸಾಲಿನಲ್ಲಿ ಸಹಕಾರ ಸಂಸ್ಥೆಗಳಿಂದ ಎಷ್ಟು ಮಂದಿ ರೈತರು ಬೆಳೆ ಸಾಲ ಕೋರಿ ಅರ್ಜಿ ಸಲ್ಲಿಸಿದ್ದಾರೆ; (ತಾಲ್ಲೂಕುವಾರು ವಿವರ ನೀಡುವುದು)	ಕೊಡಗು ಜಿಲ್ಲೆಯಲ್ಲಿ 2021-22 ನೇ ಸಾಲಿನಲ್ಲಿ ಸಹಕಾರ ಸಂಸ್ಥೆಗಳಿಗೆ ಒಟ್ಟು 35,829 ರೈತರು ಬೆಳೆ ಸಾಲ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿ ಸಲ್ಲಿಸಿದ ಎಲ್ಲಾ ರೈತರಿಗೂ ದಿನಾಂಕ:31.01.2022 ರವರೆಗೆ ಒಟ್ಟು ರೂ.590.81 ಕೋಟಿ ಸಾಲ ವಿತರಣೆ ಮಾಡಲಾಗಿರುತ್ತದೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ. (ರೂ.ಕೋಟಿಗಳಲ್ಲಿ)
ಆ	ಸದರಿ ಅರ್ಜಿ ಸಲ್ಲಿಸಿದ ರೈತರಲ್ಲಿ ಎಷ್ಟು ಮಂದಿಗೆ ಒಟ್ಟು ಎಷ್ಟು ಮೊತ್ತದ ಸಾಲವನ್ನು ಇದುವರೆಗೆ ವಿತರಿಸಲಾಗಿದೆ;	(ಕೆಳಗಿನ ಕೋಷ್ಟಕ)
ಇ	ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ತೊಂದರೆಗೀಡಾದ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಕಳೆದ ಸಾಲಿಗಿಂತ ಹೆಚ್ಚುವರಿಯಾಗಿ ಎಷ್ಟು ಮೊತ್ತದ ಸಾಲವನ್ನು ವಿತರಿಸಲಾಗಿದೇ?	ಕೊಡಗು ಜಿಲ್ಲೆಯಲ್ಲಿ 2020-21ನೇ ಸಾಲಿನಲ್ಲಿ 36,260 ಸಂಖ್ಯೆಯ ರೈತರಿಗೆ ಒಟ್ಟು 584.75 ಕೋಟಿ ಬೆಳೆ ಸಾಲ ವಿತರಣೆ ಮಾಡಲಾಗಿದ್ದು, 2021-22ನೇ ಸಾಲಿನಲ್ಲಿ 50,781 ಸಂಖ್ಯೆಯ ರೈತರಿಗೆ ರೂ.650.00 ಕೋಟಿಗಳ ಸಾಲ ವಿತರಿಸಲು ಗುರಿ ಹೊಂದಲಾಗಿದೆ. ದಿನಾಂಕ:31.01.2022 ರ ಅಂತ್ಯದವರೆಗೆ 35,829 ಸಂಖ್ಯೆಯ ರೈತರಿಗೆ ರೂ.590.81 ಕೋಟಿ ಬೆಳೆ ಸಾಲ ವಿತರಣೆ ಮಾಡಲಾಗಿದೆ. ಆ ಮೂಲಕ ಅತಿವೃಷ್ಟಿಯಿಂದ ತೊಂದರೆಗೀಡಾದ ರೈತರಿಗೆ ಅನುಕೂಲವಾಗುವಂತೆ ರೂ.6.06 ಕೋಟಿ ಹೆಚ್ಚುವರಿ ಮೊತ್ತದ ಬೆಳೆ ಸಾಲ ವಿತರಣೆ ಮಾಡಿದಂತಾಗಿರುತ್ತದೆ. 2021-22ನೇ ಸಾಲಿನಲ್ಲಿ ಪೂರ್ಣ ಸಾಲ ವಿತರಣೆಯನ್ನು ಮಾಡಲು ಮಾರ್ಚ್ 2022 ರ ಅಂತ್ಯದವರೆಗೂ ಕಾಲಾವಕಾಶವಿದ್ದು, ಇನ್ನೂ ಹೆಚ್ಚಿನ ಸಾಲ ವಿತರಿಸಲು ಅವಕಾಶಗಳಿದ್ದು, ಅದರಂತೆ ಕ್ರಮವಹಿಸಲಾಗುವುದು.

ಕ್ರ.ಸಂ	ತಾಲ್ಲೂಕು	ರೈತರ ಸಂಖ್ಯೆ	ಮೊತ್ತ
1	ಮಡಿಕೇರಿ	9,722	160.79
2	ವಿರಾಜಪೇಟೆ	4,197	76.04
3	ಕುಶಾಲನಗರ	3,944	47.59
4	ಸೋಮವಾರಪೇಟೆ	10,922	172.05
5	ಪೊನ್ನಂಪೇಟೆ	7,044	134.34
	ಒಟ್ಟು	**35,829**	**590.81**

ಸಂಖ್ಯೆ ಸಿಒ 53 ಸಿಎಲ್ಎಸ್ 2022

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು